International Journal of Kannada Research
www.kannadajournal.com

ISSN: 2454–5813
IJKR 2021; 7(2): 89-92
© 2021 IJKR
www.kannadajournal.com
Received: 09-02-2021
Accepted: 12-03-2021

**ಪ್ರತಿಮಾ ಕೆ.ಪಿ.**
ಸಹಾಯಕ ಪ್ರಾಧ್ಯಾಪಕ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಕುವೆಂಪುನಗರ, ಮೈಸೂರು,
ಕರ್ನಾಟಕ, ಭಾರತ

**Corresponding Author:**
**ಪ್ರತಿಮಾ ಕೆ.ಪಿ.**
ಸಹಾಯಕ ಪ್ರಾಧ್ಯಾಪಕ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಕುವೆಂಪುನಗರ, ಮೈಸೂರು,
ಕರ್ನಾಟಕ, ಭಾರತ

# ಶೂದ್ರ ತಪಸ್ವಿ ನಾಟಕದಲ್ಲಿ ವೈಚಾರಿಕತ

**ಪ್ರತಿಮಾ ಕೆ.ಪಿ**

ಪುರಾಣ ಕಥಾನಕಗಳನ್ನು ಸಮಕಾಲೀನ ಜೀವನದ ಸಂಗತಿಗಳೊಂದಿಗೆ ಮುಖಾಮುಖಿ ಮಾಡುವ ಯತ್ನ ಸಾಹಿತಿಗಳಿಂದ ನಡೆಯುತ್ತಲೇ ಇರುತ್ತದೆ. ಇವು ಸಾಮಾಜಿಕ ಸಮಸ್ಯೆಗಳನ್ನು ನೆನಪಿಸುವ, ಎದುರಾಗುವ, ಪ್ರಶ್ನಿಸುವ, ಇಲ್ಲವೇ ವಿಮರ್ಶಿಸುವ ಕೆಲಸವನ್ನು ಮಾಡುತ್ತಿರುತ್ತವೆ. ಈ ಹಿನ್ನೆಲೆಯಲ್ಲಿ ಬಂದ ನಾಟಕ 'ಶೂದ್ರತಪಸ್ವಿ'. ಕನ್ನಡ ಸಾಹಿತ್ಯ ಲೋಕದಲ್ಲಿ ಕ್ರಾಂತಿಯನ್ನುಂಟು ಮಾಡಿದ ವಿಚಾರ ಪ್ರಚೋದಕವಾದ ಕೃತಿ. ಉತ್ತರ ರಾಮಾಯಣದೊಳಗೆ ವಾಲ್ಮೀಕಿಯ ಹೆಸರಿನಿಂದ ಸೇರಿಕೊಂಡಿರುವ ಕಥೆಯನ್ನು ಆಧುನಿಕ ದೃಷ್ಟಿಕೋನಕ್ಕನುಗುಣವಾಗಿ ಪರಿವರ್ತಿಸಿ, ಆ ಮೂಲಕ ಶಾಶ್ವತ ಸಂದೇಶವನ್ನು ಸಾರಿರುವ ಉತ್ಕೃಷ್ಟ ಕೃತಿ. ಇಲ್ಲಿನ ಶಂಬೂಕ ಪ್ರಸಂಗವನ್ನು ನಾಟಕದಲ್ಲಿ ಕುವೆಂಪುರವರು ಸಮಕಾಲೀನ ಸಮಸ್ಯೆಯೊಂದರ ಮರುಸೃಷ್ಟಿಯೆಂಬಂತೆ ಬದಲಾಯಿಸಿ ಸಮಾಜಮುಖಿ ಸಮಸ್ಯೆಯನ್ನು ಸರಳೀಕರಿಸಿದ್ದಾರೆ. ಇದರಿಂದ ಸಮಕಾಲೀನ ಸಮಸ್ಯೆಯೊಂದಕ್ಕೆ ನ್ಯಾಯ ಒದಗಿಸುವ ಪ್ರಯತ್ನ ಮಾಡಿದ್ದಾರೆ ಎನ್ನಬಹುದು.

ಆದಿಕಾವ್ಯವೆಂದು ಪರಿಗಣಿತವಾಗಿರುವ ರಾಮಾಯಣ ಭಾರತೀಯ ಸಾಹಿತ್ಯದಲ್ಲಿನ ಮಹಾಕಾವ್ಯ. ಇದು ರಾಮಕಥೆಯನ್ನು ಮಾತ್ರವಲ್ಲದೆ ಆ ಕಾಲದ ಅನೇಕ ಸಾಮಾಜಿಕ, ಐತಿಹಾಸಿಕ ಮತ್ತು ರಾಜಕೀಯ ವಿವರಗಳನ್ನು ಒಳಗೊಂಡಿದೆ. ಅದರಲ್ಲಿ ಪ್ರಮುಖವಾದುದು ಆ ಕಾಲಘಟ್ಟದಲ್ಲಿದ್ದ ವರ್ಣಾಶ್ರಮ ಧರ್ಮದ ಕಟ್ಟುನಿಟ್ಟಾದ ಪ್ರತಿಪಾದನೆ. ಧರ್ಮವನ್ನು ರಕ್ಷಿಸಲು ಪಣತೊಟ್ಟಿದ್ದ ಪುರೋಹಿತ ವರ್ಗ ಆ ಕಾರ್ಯಕ್ಕೆ ರಾಜಸತ್ತೆಯನ್ನು ಸೆಳೆದುಕೊಂಡಿತ್ತು. ಧರ್ಮವನ್ನು ರಕ್ಷಿಸಲು ರಾಜಸತ್ತೆ ಪ್ರಧಾನ ಪಾತ್ರ ವಹಿಸಬೇಕೆಂದು ತಿಳಿಸಿ, ತಮ್ಮ ಹಿತರಕ್ಷಣೆಗೆ ಸಾಧನವಾಗಿ ಕ್ಷತ್ರಿಯರನ್ನು ಬಳಸಿಕೊಂಡು, ಶೂದ್ರರಿಗೆ ವಿದ್ಯೆ ಮತ್ತು ತಪಸ್ಸಿನ ಅವಕಾಶಗಳನ್ನು ನಿರಾಕರಿಸಿ ಶೋಷಿಸುತ್ತಿದ್ದ ಅಂಶಗಳು ರಾಮಾಯಣದಲ್ಲಿ ಕಾಣಸಿಗುತ್ತವೆ. ಇದಕ್ಕೆ ಪೂರಕವಾಗಿ ವಾಲ್ಮೀಕಿ ವಿರಚಿತ ರಾಮಾಯಣದ ಉತ್ತರಕಾಂಡದಲ್ಲಿ ಬರುವ ಶಂಬೂಕ ವಧಾ ಪ್ರಸಂಗ ಒಳ್ಳೆಯ ನಿದರ್ಶನ.

ಸೀತಾ ಪರಿತ್ಯಾಗದ ನಂತರ ರಾಮನಲ್ಲಿಗೆ ಬಂದ ವೃದ್ಧ ಬ್ರಾಹ್ಮಣನೋರ್ವನು ತನ್ನ ಮಗನು ಅಕಾಲ ಮೃತ್ಯುವಿಗೀಡಾದನೆಂದೂ, ಅದಕ್ಕೆ ರಾಜನ ದೋಷವೇ ಕಾರಣವೆಂದು ನುಡಿದು, ಸಾವನ್ನಪ್ಪಿರುವ ತನ್ನ ಸುತನನ್ನು ಬದುಕಿಸದಿದ್ದರೆ ರಾಜದ್ವಾರದಲ್ಲಿಯೇ ಪ್ರಾಣ ಬಿಡುವುದಾಗಿಯೂ, ಇದರಿಂದ ರಾಜನಿಗೆ ಬ್ರಹ್ಮಹತ್ಯಾ ದೋಷ ಪ್ರಾಪ್ತವಾಗುವುದೆಂದು ನುಡಿಯುತ್ತಾನೆ. ಬಾಲಕನ ಸಾವಿಗೆ ಕಾರಣವೇನೆಂದು ಕೇಳಿದಾಗ ರಾಮರಾಜ್ಯದಲ್ಲಿ ಶೂದ್ರನೊಬ್ಬ ತಪಸ್ಸು ಮಾಡುತ್ತಿರುವುದೇ ಕಾರಣವೆಂದು ತಿಳಿಯುತ್ತದೆ. ನಾರದನ ಪ್ರಚೋದನೆಗೆ ಒಳಗಾದ ರಾಮನು ಇದು ವರ್ಣಾಶ್ರಮ ಪದ್ಧತಿಯ ಧರ್ಮಶಾಸ್ತ್ರಕ್ಕೆ ವಿರೋಧವೆಂದು ಭಾವಿಸಿ, ಶಂಬೂಕನನ್ನು ಹುಡುಕಿಕೊಂಡು ಹೋಗಿ ಖಡ್ಗದಿಂದ ಸಂಹರಿಸಿ ಧರ್ಮವನ್ನು ರಕ್ಷಿಸುತ್ತಾನೆ. ರಾಮ ಶೂದ್ರನ ತಲೆ ಕಡಿಯುವ ಮುನ್ನ ಅವನ ನಿಲುವನ್ನಾಗಲಿ, ವಾದವನ್ನಾಗಲಿ ಕೇಳಲು ಮನಸ್ಸು ಮಾಡದೆ, ಆತ ಶೂದ್ರನೆಂದು ಖಾತರಿಯಾದ ತಕ್ಷಣವೇ ಕೊಲೆಯ ಶಿಕ್ಷೆ ನೀಡುತ್ತಾನೆ. ರಾಮನ ಈ ಕಾರ್ಯಕ್ಕೆ ದೇವಾನುದೇವತೆಗಳೂ ಹೂಮಳೆ ಸುರಿಸಿ ಪ್ರಶಂಶಿಸುತ್ತಾರೆ. ಇದನ್ನು ನೋಡಿದರೆ ಎಲ್ಲರನ್ನೂ ಒಂದೇ ಎಂದು ಭಾವಿಸಬೇಕಾದ ದೇವತೆಗಳಿಗೂ ಶೂದ್ರರ ಬಗ್ಗೆ ಅಸೂಯೆ ಇತ್ತೆ? ಎಂಬ ಪ್ರಶ್ನೆ ಹುಟ್ಟುತ್ತದೆ. ಜೊತೆಗೆ ಇದರ ಹಿಂದೆ ಶೂದ್ರರ ತಪಸ್ಸಿನ ಪ್ರಯತ್ನವನ್ನು ನಾಶಗೊಳಿಸಲು ಪಟ್ಟಭದ್ರ ಹಿತಾಸಕ್ತಿಗಳು ಹೆಣೆದ ಕುತಂತ್ರ ಕಾಣುತ್ತದೆ. ಶೂದ್ರರನ್ನು ವಿದ್ಯೆ ಮತ್ತು ತಪಸ್ಸಿನಿಂದ ದೂರವಿಡಲು ಹುನ್ನಾರ ನಡೆಸಿದ ಪುರೋಹಿತಶಾಹಿ ವರ್ಗ ರಾಜನಾದ ರಾಮನಿಂದಲೇ ಶೂದ್ರತಪಸ್ವಿಯನ್ನು ಕೊಲ್ಲಿಸಿ, ಶೂದ್ರರಲ್ಲಿ ಭೀತಿಯನ್ನು ಬಿತ್ತುವ ಕೆಲಸ ಮಾಡಿದೆ ಎನ್ನಬಹುದು.

ಮೇಲಿನ ಕಥೆಯನ್ನು ಗಮನಿಸಿದಾಗ ರಾಮರಾಜ್ಯದಲ್ಲಿ ಜಾತಿಗೊಂದು ನೀತಿ ಇತ್ತೆ? ಎಂಬ ಪ್ರಶ್ನೆ

ಬರುತ್ತದೆ. ಅಲ್ಲದೆ ಯಾವುದೋ ಕಾರಣಕ್ಕೆ ಸತ್ತ ಬ್ರಾಹ್ಮಣ ಬಾಲಕನ ಜೀವಕ್ಕೆ ಶೂದ್ರತಪಸ್ವಿಯ ಜೀವ ಬೆಲೆಯಾಗಬೇಕೆ? ಎಂಬುದು ಮತ್ತೊಂದು ಪ್ರಶ್ನೆ. ಜೊತೆಗೆ ಶೂದ್ರನ ಪ್ರಾಣ ತೆಗೆದಾದರೂ ಬ್ರಾಹ್ಮಣ ಬಾಲಕನನ್ನು ರಕ್ಷಿಸಬೇಕೆನ್ನುವ ರಾಮನ ಹಿತಾಸಕ್ತಿಯ ಹಿಂದಿರುವ ಧೋರಣೆ ಯಾವುದು? ಶೂದ್ರರೂ ರಾಮನ ಪ್ರಜೆಗಳಾಗಿದ್ದವರು. ರಾಮ ಶಂಭೂಕನನ್ನು ಶೂದ್ರನೆಂದು ಖಚಿತಪಡಿಸಿಕೊಂಡೇ ಕೊಲ್ಲುವನು. ಹಾಗಾದರೆ ಆ ಕಾಲಘಟ್ಟದಲ್ಲಿ ಆಳುವ ಅರಸರಿಗೂ ವರ್ಣದ್ವೇಷವಿತ್ತೇ? ಎಂಬ ಹತ್ತಾರು ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಅಲ್ಲದೆ 'ಆತ್ಮೋದ್ಧಾರ ಪ್ರತಿಯೊಬ್ಬರ ಕರ್ತವ್ಯ. ಶಂಬೂಕ ಮಾಡಿದ ತಪಸ್ಸು ಬರಿಯ ಕಾಣದ ಸ್ವರ್ಗದಾಸೆಯದಲ್ಲ. ಶೂದ್ರನೊಬ್ಬ ತನ್ನ ಬೌದ್ಧಿಕ ಬೆಳವಣಿಗೆಗೆ ಪಟ್ಟ ಪ್ರಯತ್ನವೂ ಹೌದು. ಇದು ಸ್ವಪ್ರಯತ್ನದಿಂದ ಮಾತ್ರ ಸಾಧ್ಯ. ಶೂದ್ರನೊಬ್ಬನು ತಪಸ್ಸಿದ್ದಿಯನ್ನು ಪಡೆದಾಗ ಹುರುಳಿಲ್ಲದ ಬರಿಯ ಮುಖವಾಡಗಳಿಂದ ಮೆರೆವ ಧರ್ಮಶಾಸ್ತ್ರಗಳ ಒಳಗುಟ್ಟು ಬಯಲಾಗುವ ಅಪಾಯವಿರುವುದರಿಂದ ಪಟ್ಟಭದ್ರ ಹಿತಾಸಕ್ತಿಗಳು ಶೂದ್ರನ ಪ್ರಯತ್ನವನ್ನು ನಾಶಗೊಳಿಸಿದ್ದಾರೆ'1 ಎನ್ನಬಹುದು.

ರಾಮಾಯಣದ ಹೆಸರಿನಲ್ಲಿ ವಾಲ್ಮೀಕಿಯ ಅಂಕಿತದಲ್ಲಿರುವ ವರ್ಣಭ್ರಾಂತಿಯ ಈ ಕತೆ 'ಹಾಸ್ಯಕ್ಕೆ ಮೂರ್ಖ ಕಿರೀಟವಿಟ್ಟಂತೆ' ಎಂದು ಕುವೆಂಪು ಲೇವಡಿ ಮಾಡಿದ್ದಾರೆ. ಮತ್ತು 'ಅಲ್ಪದೃಷ್ಟಿಯ ಕವಿಕೃತವಾದ ಪ್ರಕ್ಷಿಪ್ತ. ಇದು ಬಂದಳಿಕೆಯಂತೆ ಮಹಾಕೃತಿಯಲ್ಲಿ ಸೇರಿದೆ' ಎಂದು ಪರಿಭಾವಿಸುವ ಕುವೆಂಪು ಈ ಕಸವನ್ನು ಗುಡಿಸಿ ಹಾಕಿದಂತೆ ಶೂದ್ರತಪಸ್ವಿ ನಾಟಕ ರಚಿಸಿದ್ದಾರೆ. ಈ ವಿಚಾರಗಳನ್ನು ಲೇಖಕರೇ ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. ಅಲ್ಲದೆ ಶಂಬೂಕ ಶೂದ್ರನಾಗಿ ತಪಸ್ಸು ಮಾಡಬಾರದು ಎಂದು ವಾಲ್ಮೀಕಿ ಹೇಳುವುದು ಅಸಂಭವ. ಏಕೆಂದರೆ ವಾಲ್ಮೀಕಿಯು ಶೂದ್ರ ಮೂಲದಿಂದ ಬಂದವರಾಗಿದ್ದು, ಅನಂತರವಷ್ಟೆ ತನ್ನ ತಪಶ್ಯಕ್ತಿಯಿಂದ ಋಷಿಯಾಗಿ ಕವಿಯಾದದ್ದು.

ಮುಂದೆ ಭವಭೂತಿ ತನ್ನ 'ಉತ್ತರರಾಮ ಚರಿತ'ದಲ್ಲಿ ಶಂಬೂಕ ವಧೆಗೆ ವಿಕ್ಷಿಪ್ತ ಕಾರಣವನ್ನು ಕೊಡುತ್ತಾನೆ. ಶಂಬೂಕನನ್ನು ವಧೆ ಮಾಡಿದ ರಾಮನಿಗೆ ಪಶ್ಚಾತ್ತಾಪವಾಗುತ್ತದೆ. ಸತ್ತ ಶಂಬೂಕನಿಂಥ ಶಾಪಗ್ರಸ್ತ ಗಂಧರ್ವ ಎದ್ದು ಬಂದು ತನ್ನ ಶಾಪ ವಿಮೋಚನೆಗಾಗಿ ರಾಮನಿಗೆ ಕೃತಜ್ಞತೆ ಹೇಳುತ್ತಾನೆ. 'ಸತ್ಸಂಗವಾದ ಮರಣ ಸಂಭವಿಸಿದರೂ ಅದು ಶ್ರೇಯಸ್ಕರ' ಎಂಬುದನ್ನು ಸಾಬೀತು ಪಡಿಸಲು ಭವಭೂತಿ ಪ್ರಯತ್ನಿಸುತ್ತಾನೆ.

ವಾಲ್ಮೀಕಿ ರಾಮಾಯಣದಲ್ಲಿ ಶಂಬೂಕ ವಧೆಯಿಂದಾಗಿ ವರ್ಣಾಶ್ರಮದ ಅಸಮಾನತೆ ಹಾಗೂ ಶೋಷಣೆಯನ್ನು ಖಾಯಂಗೊಳಿಸಲು ಪ್ರಯತ್ನಿಸಿದರೆ, ಭವಭೂತಿಯ ಉತ್ತರರಾಮ ಚರಿತದಲ್ಲಿ ಶಂಬೂಕನ ಹತ್ಯೆಗೆ ಶಾಪ ವಿಮೋಚನಾ ಕಲ್ಪನೆಯನ್ನು ಸೃಷ್ಟಿಸಲಾಗಿದೆ. ಆದರೆ ಈ ಎರಡೂ ಜೀವವಿರೋಧಿತನವನ್ನು ಪ್ರಶ್ನಿಸಿದ ಕುವೆಂಪುರವರು ತಮ್ಮ 'ಶೂದ್ರತಪಸ್ವಿ' ನಾಟಕದಲ್ಲಿ ಶೂದ್ರನ ತಪಸ್ಸನ್ನು ಸಮರ್ಥಿಸಿಕೊಳ್ಳುತ್ತಲೇ ಪುರೋಹಿತಶಾಹಿಯ ಅಟ್ಟಹಾಸವನ್ನು ಮಟ್ಟಹಾಕುವ ಪ್ರಯತ್ನ ಮಾಡುತ್ತಾರೆ.

ಪುರಾಣದ ಈ ಕಥೆಯನ್ನು ಕುವೆಂಪುರವರು ಕಾಲಕ್ಕೆ ತಕ್ಕಂತೆ ತಮ್ಮ ಸೃಜನಶೀಲ ಪ್ರತಿಭೆಯಿಂದ ರೂಪಾಂತರಗೊಳಿಸಿರುವ ಕ್ರಮ ಕುತೂಹಲಕಾರಿಯಾದುದು. ಜಡವ್ಯವಸ್ಥೆಯಿಂದ ಜಿಡ್ಡು ಮೆತ್ತಿಕೊಂಡಿದ್ದ ಶಂಬೂಕವಧೆ ಪ್ರಸಂಗ ಕುವೆಂಪುರವರ ಅದ್ಭುತ ಪ್ರತಿಭೆಯಿಂದ ನಾಟಕೀಯ ಸನ್ನಿವೇಶಗಳಿಂದ ಶ್ರೇಷ್ಠ ನಾಟಕವಾಗಿ 'ಶೂದ್ರತಪಸ್ವಿ' ಹೊಸ ರೂಪ ತಾಳಿ ಪ್ರಜ್ವಲವಾದ ಬೆಳಕನ್ನು ಹರಡಿದೆ. ವೈಚಾರಿಕತೆಯ ಆಶಯಗಳನ್ನು ಹೊರಚೆಲ್ಲುವ 'ಶೂದ್ರತಪಸ್ವಿ' ನಾಟಕ ರಚನೆಯಾದದ್ದು 1944ರಲ್ಲಿ. ಶೂದ್ರನಾದ ಶಂಬೂಕನ ತಪಸ್ಸು, ಬ್ರಾಹ್ಮಣನಲ್ಲಿ ಉಂಟಾದ ಅಸಹನೆಯನ್ನು ಕೇಂದ್ರವಾಗಿಟ್ಟುಕೊಂಡ ರಾಮಾಯಣದ ಈ ಘಟನೆಯನ್ನು ಕುವೆಂಪು ತಮ್ಮ ವಿಶ್ವಮಾನವ ತತ್ವ ಸಂದೇಶಕ್ಕೆ ಅನುಗುಣವಾಗಿ ಪುನರ್‌ಸೃಷ್ಟಿಸಿದ್ದಾರೆ. ಮಾತ್ರವಲ್ಲದೆ ಮಾನವೀಯ ಅಂತಃಕರಣದ ನೆಲೆಯಲ್ಲಿ ವೈಚಾರಿಕತೆಯನ್ನು ಪ್ರತಿಪಾದನೆ ಮಾಡುವ, ಪ್ರಧಾನ ಸಂಸ್ಕೃತಿಯ ದೋಷಗಳನ್ನು ಎತ್ತಿಹಿಡಿದು, ಸಮಾನತೆಯ ಪರ್ಯಾಯ ಸಂಸ್ಕೃತಿ ನಿರ್ಮಾಣ ಮಾಡುವ ವಿಧಾನ ಈ ನಾಟಕದ ವಸ್ತುವಿನ ಮುಖ್ಯ ಭೂಮಿಕೆಯಾಗಿದೆ.

'ಶೂದ್ರತಪಸ್ವಿ' ನಾಟಕದಲ್ಲಿ ಮೂರು ದೃಶ್ಯಗಳಿವೆ. ಮೊದಲನೆಯ ದೃಶ್ಯ ಶಂಬೂಕಾಶ್ರಮವಿರುವ ಅರಣ್ಯದ ಬಹಿರ್ವಲಯದ ದೃಶ್ಯದಿಂದ ಆರಂಭವಾಗುತ್ತದೆ. ನಾಟಕದ ಮೊದಲ ದೃಶ್ಯವೇ ಕುವೆಂಪುರವರ ಪ್ರಖರ ದೃಶ್ಯ ಪ್ರತಿಭೆಗೆ ಸಾಕ್ಷಿಯಾಗಿದೆ. ಇಲ್ಲಿ ಶಂಬೂಕ ಋಷಿಯ ಆಶ್ರಮಕ್ಕೆ ಕಾವಲು ನಿಂತ ವೃಕ್ಷಭೈರವ ಮತ್ತು ಮೃತ್ಯುವಿನ ಮುಖಾಮುಖಿಯ ಚಿತ್ರಣ ರೋಚಕವಾಗಿ ಮೂಡಿಬಂದಿದೆ. ಪವಿತ್ರವಾದ ಶಂಬೂಕನ ಆಶ್ರಮ ಮೌನದಲ್ಲಿದ್ದು, ಅದುವರೆಗೂ ಪ್ರಶಾಂತತೆ ಮತ್ತು ನಿರ್ಮಲತೆಯನ್ನೇ ಮೆರೆಯುತ್ತಿದ್ದು, ಇದ್ದಕ್ಕಿದ್ದಂತೆ ಇಡೀ ಪ್ರಕೃತಿ ಪ್ರಕ್ಷುಬ್ಧವಾಗಿ ಅಮಂಗಳಕರ ಮುನ್ಸೂಚನೆ ನೀಡಲಾರಂಬಿಸಿದ್ದನ್ನು ಕಂಡು ಆಶ್ರಮದ ಕಾವಲಿಗೆ ನಿಂತ ವೃಷಭೈರವ ಬದ್ಧಭ್ರುಕುಟಿಯಾಗಿ 'ಏನವಿನಯಂ ಇಂದೀ ಪ್ರಕೃತಿ ಸಾಧ್ವಿಗೆ' ಎಂದು ಗಂಭೀರವಾಗಿ ಹೇಳಿ, ಎದುರಿಗೆ ನಿಂತ ಕರಾಳಾಕೃತಿಯ ಪರಿಚಯ ಕೇಳುತ್ತಾನೆ.

'ಮೃತ್ಯುವೆನ್ । ದುರ್ ಮೃತ್ಯುವೆನ್, ಪುಗಲ್ ಬಯಸಿ ಬಂದಿರ್ಪೆನ್ ಈ ತಪೋವನಕ್ಕೆ'

ಎಂದು ಮೃತ್ಯು ತನ್ನ ಪರಿಚಯವನ್ನು ಹೇಳಿಕೊಂಡಾಗ, ಈ ತಪೋವನದಂತಹ ಅಮೃತಕ್ಷೇತ್ರವನ್ನು ದುರ್ಮೃತ್ಯು ಪ್ರವೇಶಿಸಿಬೇಕಾದರೆ ಅದಕ್ಕೆ ದಾರಿ ತಪ್ಪಿರಬೇಕೆಂದು ತಿಳಿದು ಅದನ್ನು ತಡೆಯಲು ಮುಂದಾಗುತ್ತಾನೆ. ಆಗ ಮೃತ್ಯುದೇವತೆ 'ಎಲೆ ಮರುಳೆ ಕೇಳ್, ಶಂಬೂಕ ಋಷಿಯ ಗೌರವಕ್ಕಾಗಿ ಬಂದನಯ್' ಎಂದು ಸ್ಪಷ್ಟಪಡಿಸಿ, ಶಂಬೂಕಾಶ್ರಮ ಹೊಕ್ಕ ಬ್ರಾಹ್ಮಣನನ್ನು ಕುರಿತು, ಬ್ರಾಹ್ಮಣನು ಗುರುದೇವನಾದ ಶಂಬೂಕ ಋಷಿಗೆ ಅವಜ್ಞೆಯನ್ನು ಮಾಡುವುದರ ಮೂಲಕ ಅಪರಾಧ ಎಸಗಿದ್ದಾನೆ. ಧರ್ಮದೇವತೆಯ ಆಜ್ಞೆಯಂತೆ ತಾನು ಶಂಬೂಕನನ್ನು ಕಾಪಾಡಲು ಬಂದಿರುವ ಉದ್ದೇಶವನ್ನು ಸ್ಪಷ್ಟಪಡಿಸುತ್ತದೆ. ಇದನ್ನು ಕೇಳುತ್ತಿದ್ದಂತೆ ಭೈರವ,

'ಶಿವ ಶಿವಾ । ಏನ್ ಭಯಂಕರ ಪಾಪಂ।
ಶ್ರೀರಾಮನಾಳುತಿರ್ಪ ಧರ್ಮ ರಾಜ್ಯದೊಳ್'

ಎನ್ನುತ್ತಿದ್ದಂತೆ ಮೃತ್ಯು ಆಶ್ರಮವನ್ನು ಪ್ರವೇಶಿಸುತ್ತದೆ. ಭೈವರ ಮತ್ತೆ ವೃಕ್ಷರೂಪಿಯಾಗಿ ನಿಲ್ಲುತ್ತಾನೆ.

"ಮೃತ್ಯು ಮತ್ತು ವೃಕ್ಷಭೈರವರಿಗೆ ಸಾಕಾರ ರೂಪವನ್ನು ಕೊಟ್ಟು ಕುವೆಂಪುರವರು ಈ ದೃಶ್ಯವನ್ನು ನಿರ್ವಹಿಸಿರುವ ರೀತಿ, ಅದರಿಂದ ಸಾಧಿಸಿರುವ ಪರಿಣಾಮ ಮತ್ತು ಧ್ವನಿಸಿರುವ ಅರ್ಥಗಳು ಅಪೂರ್ವವಾದುವು. ಪೂಜಾವಿಧಿಗೆ ಪೂವಿರಿಯಲು ಶಂಬೂಕನ ಆಶ್ರಮವನ್ನು ಪ್ರವೇಶಿಸಿದ ಬ್ರಾಹ್ಮಣ ಆ ತಪಸ್ವಿಯನ್ನೇ ಅವಜ್ಞೆಗೈಯುತ್ತಾನೆ. ಅದಕ್ಕೆ ಕಾರಣವೋ ಕ್ಷುಲ್ಲಕವಾದದ್ದು. ತಪಶ್ಯಕ್ತಿ ದೈವಶಕ್ತಿಗಳಿಗಿಂತ ವರ್ಣವಿಭೇದವೇ ಬ್ರಾಹ್ಮಣನಿಗೆ ಪ್ರಮುಖವಾಗಿ ಕಂಡಿದೆ. ಇದು ಹಿಂದಿನ ಕಥೆಗೆ ಕುವೆಂಪುರವರು ಕೊಟ್ಟ ಧಾರ್ಮಿಕ ಔನ್ನತ್ಯದ ಪರಿವರ್ತನೆಯನ್ನು ಸೃಷ್ಟಿಪಡಿಸುತ್ತದೆ. ಮುಂದೆ ರಾಮಚಂದ್ರನು ಇದನ್ನೆ ತನ್ನ ಕಾರ್ಯ ನಿರ್ವಹಣೆಯಿಂದ ಸಕ್ರಿಯವಾಗಿ ಸ್ಥಾಪಿಸುತ್ತಾನೆ"2

ಎರಡನೇ ದೃಶ್ಯ ಅಯೋಧ್ಯೆಯಲ್ಲಿ ನಡೆಯುವ ಪ್ರಸಂಗ. ಬ್ರಾಹ್ಮಣನೊಬ್ಬ ರೋಧಿಸುತ್ತಾ ಶ್ರೀ ರಾಮಚಂದ್ರನ ಅರಮನೆ

ಬಳಿಯ ಉದ್ಯಾನವನದಲ್ಲಿ, ಮಗನ ದುರ್ಮರಣ ರಾಮರಾಜ್ಯದಲ್ಲಿ ಅಧರ್ಮವನ್ನುಂಟುಮಾಡಿದೆ ಎಂದು ಬೊಬ್ಬಿಡುತ್ತಾನೆ. ಕಾರಣ ತಿಳಿಯಲು ಬಂದ ರಾಮಚಂದ್ರನಿಗೆ,
'ನನ್ನ ಕಂದನ ಹರಣಮಂ ಬೇಡಿ ಬಂದೆನ್, ಕೃಪೆಯಿಂದದನ್ ನೀಡು' ಎಂದು ಕೇಳುತ್ತಾನೆ. ಅದಕ್ಕೆ ರಾಮನು ಧರ್ಮಾಧಿಕಾರಿಯಾದ ಯಮ ನಿಷ್ಕಾರಣವಾಗಿ ಹೀಗೆ ಮಾಡಿರಲಾರ. 'ಇದರೊಳೊಂದೇನೋ ಧರ್ಮಚ್ಯುತಿ ಇರಲೇವೇಳ್ಕುಂ' ಯಾರು ಈ ಅಪರಾಧ ಮಾಡಿದರೆಂಬುದು ತಿಳಿಯದು, 'ನೀಮ್ ಅರಿತಿರ್ಪೊಡೆ ಅದನ್ ಒರೆಯಿಂ' ಎಂದು ಬ್ರಾಹ್ಮಣನನ್ನು ಕೇಳುತ್ತಾನೆ. ಬ್ರಾಹ್ಮಣ ಅಂಜುತ್ತಾ ರಾಮನೇ ಅಪರಾಧಿ ಎಂದು ಸೂಚಿಸುತ್ತಾನೆ. ರಾಮ ತುಸು ಬೆಚ್ಚಿದರೂ ಕೋಪಗೊಳ್ಳದೇ ತನ್ನದೇನು ಅಪರಾಧವೆಂದು ಪ್ರಶ್ನಿಸಿದಾಗ,

*ಅಲ್ತಲ್ತು ರಾಮಚಂದ್ರ*
ಶೂದ್ರನ್ ತಪಂಗೆಯ್ವುದು ಅಧರ್ಮಕ್ಕೆ
ವರ್ಣಾಶ್ರಮ ಧರ್ಮದುಲ್ಲಂಘನೆಯ ಪಾಪಕ್ಕೆ
ನಿನ್ನ ಬಾಲಪ್ರಜೆಯಾರ್ವನ್ ಬಲಿಯಾದನ್

ಎಂದು ಮಗನ ಸಾವಿಗೆ ಕಾರಣವನ್ನು ತಿಳಿಸುತ್ತಾನೆ. ರಾಮರಾಜ್ಯದಲ್ಲಿ ಶೂದ್ರನೊಬ್ಬನಿಗೆ ತಪಸ್ಸು ಮಾಡಲು ಅವಕಾಶ ಮಾಡಿಕೊಟ್ಟಿರುವುದು. ಆ ಅಧರ್ಮಿಯ ತಪಸ್ವಿಯ ದರ್ಶನದ ಫಲವಾಗಿ ತನ್ನ ಮಗನಿಗೆ ಮರಣ ಉಂಟಾಗಿದೆ ಎನ್ನುತ್ತಾನೆ. ರಾಮರಾಜ್ಯದಲ್ಲಿ ತಪಸ್ಸು, ವೇದಾಧ್ಯಯನ, ದರ್ಶನ ಎಲ್ಲವೂ ತನ್ನ ವರ್ಗಕ್ಕೆ ಮಾತ್ರ ಮೀಸಲು, ಶೂದ್ರ ತಪಸ್ಸು ಅಧರ್ಮ ಎನ್ನುವುದು ಬ್ರಾಹ್ಮಣನ ಅಭಿಪ್ರಾಯ
ರಾಮನಿಗೆ ಬ್ರಾಹ್ಮಣನನ್ನು ಕಂಡು ಕನಿಕರ, ದುಃಖ, ಕೋಪ ಏಕಕಾಲದಲ್ಲಿ ಉಂಟಾಗುತ್ತದೆ. 'ವರ್ಣಾಗರ್ವಾಂಧಂಗೆ ಈ ಶಾಸ್ತ್ರ ಮೂರ್ಖಂಗೆಂತು ಬುದ್ಧಿಗಲಿಪೆನ್', ಶಂಬೂಕ ಮಹಾಯೋಗಿಯನ್ನು ತಿರಸ್ಕರಿಸಿದ ಅಧರ್ಮದಿಂದ ಈತನ ಮಗ ಸತ್ತಿರುವುದನ್ನು ಈತ ತಿಳಿಯನಾರನಲ್ಲ ಎಂದು ಆಲೋಚಿಸುತ್ತಾ ಈತನಿಗೆ ಬುದ್ಧಿ ಕಲಿಸಲು ನಿರ್ಧರಿಸಿ, ಅವನೊಡಗೂಡಿ ಪುಷ್ಪಕ ವಿಮಾನವೇರಿ ಶಂಬೂಕಾಶ್ರಮಕ್ಕೆ ಹೊರಡುತ್ತಾನೆ.
ಮೂರನೆಯ ದೃಶ್ಯದಲ್ಲಿ ಮಹಾತಪಸ್ಸಿನಲ್ಲಿರುವ ಶಂಬೂಕ ಮಹರ್ಷಿ ಆಶ್ರಮಕ್ಕೆ ಶ್ರೀರಾಮ ಮತ್ತು ಬ್ರಾಹ್ಮಣನ ಪ್ರವೇಶವಾಗುತ್ತದೆ. ತಪೋಗುಣ, ಶಾಂತಿ ನೆಲೆಸಿರುವ ಆಶ್ರಮದ ಪ್ರಶಾಂತ ಸೌಂದರ್ಯವನ್ನು ಕಂಡು ಶ್ರೀರಾಮ ಭಾವಪರವಶನಾಗಿ ಶಂಬೂಕಾಶ್ರಮಕ್ಕೆ ನಮಸ್ಕರಿಸುತ್ತಾನೆ. ಇದನ್ನು ಕಂಡು ರೋಷವುಕ್ಕಿದ ಬ್ರಾಹ್ಮಣ ಶೂದ್ರನನ್ನು ಕೊಲ್ಲುವಂತೆ ಒತ್ತಾಯಿಸುತ್ತಾನೆ. ಅನಂತರ ರಾಮನು ಶಂಬೂಕನ ತಪಮಿರ್ದ ತಾಣವನ್ನು ತೋರಿಸುವಂತೆ ಹೇಳಿದಾಗ, 'ಅದೆ ನೋಡಾ ವಾಲ್ಮೀಕದೆಡೆಗೆ' ಎಂದು ತೋರುತ್ತಾನೆ. ಇಲ್ಲಿ ಕವಿ ಕುವೆಂಪು ವಲ್ಮೀಕ ಪದದಿಂದ ರಾಮನ ಸ್ಮರಣೆಯನ್ನು ವಾಲ್ಮೀಕಿಯತ್ತ ಸೆಳೆದಿದ್ದಾರೆ.
ಶಂಬೂಕನನ್ನು ಶಿರಚ್ಛೇದ ಮಾಡಲು ಬ್ರಾಹ್ಮಣ ಒತ್ತಾಯಿಸಿದಾಗ ರಾಮ ಬ್ರಾಹ್ಮಣನಿಗೆ ಕೆಲವೊಂದು ಪ್ರಶ್ನೆ ಹಾಕುತ್ತಾನೆ. ಆ ಮೂಲಕ ತರ್ಕಸಮ್ಮತವಾದ ವಿಚಾರ ಶಕ್ತಿಯನ್ನು ಆತನಲ್ಲಿ ಪ್ರಚೋದಿಸಲು ಪ್ರಯತ್ನಿಸುತ್ತಾನೆ. 'ತಪಸ್ಸುಗೈಯುವವನು ಪೂಜ್ಯನಲ್ಲವೇ? ಈ ತಪಸ್ವಿಯಂ ಕೊಲ್ವದುಂ ಪಾಪಯಾಗದೆ?" ಎಂದಾಗ, ತಪಸ್ಸನ್ನು ಮಾಡುವವರೆಲ್ಲರೂ, ಅವರು ಯಾರೇ ಆಗಿರಲಿ ಪೂಜ್ಯರೇ ಎಂಬುದನ್ನು ಬ್ರಾಹ್ಮಣ ತರ್ಕಸಮ್ಮತವೆಂದು ಒಪ್ಪುತ್ತಾನೆ. ಆದರೆ ಕಾರ್ಯತಃ ಒಪ್ಪಲಾರ.

'ತರ್ಕಕ್ಕೆ ಮಿಗಿಲ್ ಶ್ರುತಿವಾಕ್ಯಮೈಸೆ
ತಪಕ್ಕನಧಿಕಾರಿ ಶೂದ್ರನ್
ಎಂಬುದದು ಶಾಸ್ತ್ರಪ್ರಸಿದ್ಧಂ'

ಎಂದು ಪರಂಪರೆಯ ಶ್ರದ್ಧೆಯನ್ನು ವ್ಯಕ್ತಪಡಿಸುತ್ತಾನೆ. 'ತ್ಯಾಜ್ಯಮಾನಾಯಪಾಲ್ ನಾಯ ಪಾಲ್ಗೆಣೆ ಶೂದ್ರನ ತಪಂ' ಎಂದಾಗ ರಾಮ ವ್ಯಂಗ್ಯದಿಂದ 'ಸಾರ್ಥಕವಾಯ್ತು ನೀ ಕಲಿತ ವಿದ್ಯೆ ಆಚಾರ್ಯ' ಎನ್ನುತ್ತಾನೆ. ಬ್ರಾಹ್ಮಣನನ್ನು ಸಂತೈಸಲು ರಾಮ ಶಸ್ತ್ರ ಹೂಡಿದಾಗ ಬ್ರಹ್ಮಾಸ್ತ್ರವನ್ನು ಪ್ರಯೋಗಿಸುವಂತೆ ಬ್ರಾಹ್ಮಣ ಪಟ್ಟು ಹಾಕುತ್ತಾನೆ. ರಾಮ 'ಅರಸಿ ಕೊಲ್, ಅರಗುಲಿಯನ್' ಎಂದು ಬ್ರಹ್ಮಾಸ್ತ್ರ ಪ್ರಯೋಗ ಮಾಡುತ್ತಾನೆ. ಬ್ರಹ್ಮಾಸ್ತ್ರ ಪರಿಕಲ್ಪನೆಯನ್ನು ನಾಟಕದಲ್ಲಿ ಕುವೆಂಪು ಮಾರ್ಮಿಕವಾಗಿ ಬಳಸುತ್ತಾರೆ. ಬ್ರಹ್ಮಾಸ್ತ್ರ ಭಯಂಕರವಾದದ್ದು ತನ್ನ ಶತ್ರುವನ್ನು ಹುಡುಕಿ ಕತ್ತರಿಸದೇ ಬಿಡನು ಎಂದು ಹೇಳಿದ ರಾಮ ಬ್ರಹ್ಮಾಸ್ತ್ರ ಪ್ರಯೋಗಿಸುತ್ತಾನೆ. ಬ್ರಹ್ಮಾಸ್ತ್ರವು ಶಂಬೂಕ ತಪಸ್ವಿಯ ಬಳಿ ತೆರಳಿ ಅವರ ತಪೋಮಹಿಮೆಗೆ ನಮಿಸುತ್ತದೆ. ನಂತರ ಬ್ರಾಹ್ಮಣನೆಡೆಗೆ ತಿರುಗಿ ಧಾವಿಸತೊಡಗಿದಾಗ ಅಧರ್ಮಿ ಯಾರು ಎಂಬುದು ಬ್ರಾಹ್ಮಣನಿಗೆ ಅರಿವಾಗಿ ಬೊಬ್ಬಿಡುತ್ತಾನೆ. ಅಂತಿಮವಾಗಿ ಬ್ರಹ್ಮಾಸ್ತ್ರವನ್ನು ರಾಮ ಹಿಂಪಡೆಯುತ್ತಾನೆ. ಬ್ರಾಹ್ಮಣನ ವರ್ಣಭ್ರಾಂತಿ ಹರಿಯುತ್ತದೆ.

ಬೋಧಮಾಯ್ತನಗೀಗಳ್, ಮಹಾಪ್ರಾಜ್ಞ
ಬುದ್ಧಿಗಲಿಸಿದಯ್ ಸಂಪ್ರದಾಯ ಬದ್ಧಂಗೆ
ಶಾಸ್ತ್ರಸಂಮೂಢಂಗೆ ಜಾತಿಗರ್ವಾಂಧಂಗೆ

ಎಂದು ತನ್ನ ತಪ್ಪನ್ನು ಅರಿತು ಪಶ್ಚಾತ್ತಾಪ ಪಟ್ಟು ಔನ್ನತ್ಯಕ್ಕೇರುತ್ತಾನೆ. 'ಆರಾದರೇನ್? ಆರಾಧ್ಯರ್ ತಪೋಧನರ್' ಎಂದು ಮನಃಪೂರ್ವಕವಾಗಿ ಒಪ್ಪಿಕೊಳ್ಳುವ ವಿಶಾಲ ದೃಷ್ಟಿಯನ್ನು ಪಡೆಯುತ್ತಾನೆ. ಮಲಗಿದ್ದ ಬ್ರಾಹ್ಮಣ ಕುಮಾರ ಎದ್ದು ಬರುತ್ತಾನೆ. ಬ್ರಾಹ್ಮಣ ಮತ್ತು ಕುಮಾರ ಇಬ್ಬರೂ ಶಂಬೂಕನಿಗೆ ಕೈ ಮುಗಿಯುತ್ತಾರೆ. ಆಗ ಋಷಿಯ ಸುತ್ತಲೂ ಬೆಳೆದಿದ್ದ ಹುತ್ತ ಸ್ವಲ್ಪ ಅಲುಗಿ, ತೋಳುಗಳೆರಡು ಹೊರದೋರಿ ಆಶೀರ್ವಾದ ಮುದ್ರೆಯಲ್ಲಿ ನಿಲ್ಲುತ್ತವೆ. ದಿವ್ಯಧ್ವನಿ ಮೊಳಗಿ ಪುಷ್ಪವೃಷಿಯಾಗಿ ನಾಟಕ ಮುಕ್ತಾಯವಾಗುತ್ತದೆ. 'ಶ್ರೀ ಸಾಮಾನ್ಯನೆ ಭಗವನ್ ಮಾನ್ಯಂ' ಎಂಬ ತತ್ವ ಈ ನಾಟಕದ ಒಟ್ಟು ಧ್ವನಿಯಾಗಿದೆ.
ಕುವೆಂಪು ಅವರ 'ಶೂದ್ರತಪಸ್ವಿ'ಯಲ್ಲಿ ಬರುವ ರಾಮ ರಾಮಾಯಣದ, ಉತ್ತರಕಾಂಡದ ರಾಮನಾಗಿರದೆ, ಸಮಕಾಲೀನ ಜೀವನಕ್ಕೆ ತಕ್ಕ ಹಾಗೆ ಯೋಚಿಸುವ ಪ್ರಗತಿಪರ ಆಧುನಿಕ ರಾಮನಾಗಿ ಚಿತ್ರಿತನಾಗಿದ್ದಾನೆ. ಶೂದ್ರ ತಪಸ್ಸು ಮಾಡುವುದು ಅಂದರೆ ಜ್ಞಾನ ಸಂಪಾದನೆ ಮಾಡುವುದು ಅಧರ್ಮ, ಪಾಪ ಎಂಬ ಮಾನವವಿರೋಧಿ ಗತಕಾಲದ ಹಳಸಿದ ಮೌಲ್ಯವನ್ನು ಬಿಸುಟು ಮನುಷ್ಯನ ನಿಜವಾದ ಯೋಗ್ಯತೆಯನ್ನು ಅಳೆಯಲು ಜಾತಿ ಮಾನದಂಡವಲ್ಲ ಎಂಬ ದೃಢ ನಿರ್ಧಾರವನ್ನು ನಾಟಕ ಪ್ರಕಟಿಸುತ್ತದೆ.
ಉತ್ತರಕಾಂಡದ ಈ ನಾಟಕ ಎಲ್ಲಾ ಪುರೋಹಿತಶಾಹಿ ಮನಸ್ಸುಗಳಿಗೂ ಪಾಠ ಹೇಳುವಂತಿದೆ. ಜಾತಿ ಶ್ರೇಷ್ಠತೆಯ ವ್ಯಸನದಿಂದ ರೋಗಗ್ರಸ್ಥವಾಗಿರುವ ಪುರೋಹಿತ ಶಾಹಿ ಮನಸ್ಸುಗಳಿಗೆ ಈ ನಾಟಕ ಚಿಕಿತ್ಸೆ ಕೊಡುವಂತೆ ಮೂಡಿ ಬಂದಿದೆ. ಜಪತಪಗಳು, ಆಧ್ಯಾತ್ಮ ಯಾವುದೇ ಜಾತಿಯ ಸ್ವತ್ತಲ್ಲವೆಂದು, ಎಲ್ಲರಿಗೂ ಆತ್ಮಜ್ಞಾನ ಸಂಪಾದಿಸುವ, ಆಧ್ಯಾತ್ಮದಲ್ಲಿ ತೊಡಗುವ ಹಕ್ಕಿದೆಯೆಂದು ಅರಿವು ಮೂಡಿ, ತಾನು ಮಾಡಿದ ತಪ್ಪಿಗೆ ಬ್ರಾಹ್ಮಣ ಪಶ್ಚಾತ್ತಾಪ ಪಡುತ್ತಾನೆ. ಶ್ರೀರಾಮನು ಬ್ರಾಹ್ಮಣನನ್ನು ಅಥವಾ

ಶಂಬೂಕನನ್ನು ಅನುಗ್ರಹಿಸಿ ಜಾತಿಗರ್ವಾಂಧತೆಯ ಅಪಾಯದ ಬಗ್ಗೆ ತಿಳಿಸುತ್ತಾನೆ. ಕುವೆಂಪು ಮೂಲ ರಾಮಾಯಣದಲ್ಲಿರುವ ರಾಮನನ್ನು ಜೀವವಿರೋಧಿ ನೆಲೆಯಿಂದ ಶೂದ್ರತಪಸ್ವಿಯಲ್ಲಿ ಬಿಡುಗಡೆಗೊಳಿಸಿ ರಾಮ ಮತ್ತು ಬ್ರಾಹ್ಮಣರ ಮನಃಪರಿವರ್ತನೆಗೊಳಿಸುತ್ತಾರೆ.

ಪ್ರಸ್ತುತ ನಾಟಕದಲ್ಲಿ ಕುವೆಂಪುರವರ ಸಮತೂಕದ ಪ್ರಜ್ಞೆ ಅನಾವರಣಗೊಂಡಿದೆ. ಅತ್ತ ಶಂಬೂಕನೂ ಸಾಯಬಾರದು, ಇತ್ತ ಬ್ರಾಹ್ಮಣ ಪುತ್ರನೂ ಸಾಯಬಾರದು ಪುರೋಹಿತ ಶಾಹಿಗಳ ಗರ್ವಭಂಗವಷ್ಟೇ ।ನಾಟಕದ ಆಶಯವಾಗಿದೆ. ದುಡಿಯುವ ವರ್ಗಗಳ ಶತ್ರುವಾಗಿದ್ದ ಪುರೋಹಿತಶಾಹಿಗಳ ಪ್ರತಿನಿಧಿಯಾಗಿದ್ದ ಬ್ರಾಹ್ಮಣನನ್ನು ಬ್ರಹ್ಮಾಸ್ತ್ರ ಪ್ರಯೋಗದಿಂದ ಶಿಕ್ಷಿಸುವುದು ಸೂಕ್ತವಾಗಿತ್ತಾದರೂ, ಕುವೆಂಪು ಇಲ್ಲಿ ಜೀವಹಾನಿಯನ್ನು ಮಾಡಬಯಸಲಿಲ್ಲ. ಅದು ಅವರ ಆಶಯವೂ ಆಗಿರಲಿಲ್ಲ. ಯಾವ ಶ್ರೀರಾಮನನ್ನು ಮುಂದಿಟ್ಟುಕೊಂಡು ಪುರೋಹಿತಶಾಹಿ ವರ್ಗ ತಮ್ಮ ವರ್ಣಾಶ್ರಮ ಸಂಸ್ಕೃತಿಯನ್ನು ಮುಂದುವರೆಸಲು ಸತತವಾಗಿ ಪ್ರಯತ್ನಿಸುತ್ತಿತ್ತೋ ಅದೇ ಶ್ರೀರಾಮನನ್ನು ಕೇಂದ್ರವಾಗಿಟ್ಟುಕೊಂಡ ಕುವೆಂಪುರವರು ಪುರೋಹಿತಶಾಹಿಯ ಜನವಿರೋಧಿ ವರ್ಣಾಶ್ರಮ ಕಲ್ಪನೆಯನ್ನು 'ಶೂದ್ರ ತಪಸ್ವಿ'ಯಲ್ಲಿ ಛಿದ್ರಗೊಳಿಸುತ್ತಾರೆ. ಸ್ವಸಾಮರ್ಥ್ಯವಿದ್ದರೆ ಯಾರು ಬೇಕಾದರೂ ಉನ್ನತ ಹಂತ ತಲುಪಬಹುದಾದ ಸಾಧ್ಯತೆಯನ್ನು ಬೆಂಬಲಿಸಿದ್ದಾರೆ.

ನಾಟಕದಲ್ಲಿ ಪ್ರತಿಭಟನಾತ್ಮಕ ನೆಲೆ ಸ್ಪಷ್ಟವಾಗಿ ರೂಪುಗೊಂಡಿದೆ. ಸಾಮಾಜಿಕ ಮೌಲ್ಯಗಳನ್ನು ಸಮಕಾಲೀನ ವಿದ್ಯಮಾನಗಳಿಗೆ ಹೋಲಿಸಿ ನೋಡುವ ಕ್ರಮವನ್ನು ಕುವೆಂಪು ಇಲ್ಲಿ ಎತ್ತಿ ಹಿಡಿದಿದ್ದಾರೆ. ನಾಟಕದಲ್ಲಿ 'ಶೂದ್ರತಪಸ್ವಿ' ಎಂಬ ಹೆಸರೇ ಒಂದು ಸಮರ್ಥ ಪ್ರತಿಮೆಯಾಗಿ ನಿಲ್ಲುತ್ತದೆ. ವರ್ಣಭೇದ ನೀತಿಯನ್ನು ಸಮಾಜಮುಖಿಯಾದ ಸಮಸ್ಯೆಯೊಂದಕ್ಕೆ ಪರಿಹಾರವೆಂಬಂತೆ ಬ್ರಾಹ್ಮಣ ಸಹಿತವಾಗಿ ಎಲ್ಲರೂ ಒಪ್ಪಿಕೊಳ್ಳುವಂತೆ ಚಿತ್ರಿಸಿದ್ದಾರೆ.

ಕುವೆಂಪು ಮೂಲ ರಾಮಾಯಣದಲ್ಲಿರುವ ರಾಮನನ್ನು ಜೀವವಿರೋಧಿ ನೆಲೆಯಿಂದ ಶೂದ್ರತಪಸ್ವಿಯಲ್ಲಿ ಬಿಡುಗಡೆಗೊಳಿಸಿ ರಾಮ ಮತ್ತು ಬ್ರಾಹ್ಮಣರ ಮನಃಪರಿವರ್ತನೆಗೊಳಿಸುತ್ತಾರೆ. ಮನುಷ್ಯ ವಿರೋಧಿ ಧರ್ಮವನ್ನು ಮನುಷ್ಯ ಧರ್ಮ ಗೆಲ್ಲಬೇಕು ಎಂಬ ಆಶಯವನ್ನು ನಾಟಕದಲ್ಲಿ ವ್ಯಕ್ತಪಡಿಸುತ್ತಾರೆ.

**ಅಡಿಟಿಪ್ಪಣಿಗಳು**

1. ರಮೇಶ್ಚಂದ್ರ ದತ್ – ಲೇಖನ: ಶೂದ್ರತಪಸ್ವಿಯಲ್ಲಿ ವೈಚಾರಿಕತೆ, ಸಮಾನತೆ ಮತ್ತು ವಿಶ್ವಮಾನವತ್ವದ ಪರಿಕಲ್ಪನೆಗಳು, ಕೃತಿ: ಕುವೆಂಪು ಸಾಹಿತ್ಯ ತೌಲನಿಕ ಅಧ್ಯಯನ, ಸಂ.ದೇಜಗೌ, ಎಚ್.ಜೆ.ಲಕ್ಕಪ್ಪಗೌಡ, ಪುಟ.120
2. ಡಾ. ಎಚ್.ತಿಪ್ಪೇರುದ್ರಸ್ವಾಮಿ – ಲೇಖನ: ಕುವೆಂಪು ಅವರ ನಾಟಕಗಳು ಕೃತಿ: ಗಂಗೋತ್ರಿ, ಕುವೆಂಪು ಅಭಿನಂದನಾ ಗ್ರಂಥ, ಪುಟ.832

**ಪರಾಮರ್ಶನ ಕೃತಿಗಳು:**

1. ಕುವೆಂಪು ಸಾಹಿತ್ಯ ತೌಲನಿಕ ಅಧ್ಯಯನ: ಸಂ.ದೇಜಗೌ, ಎಚ್.ಜೆ.ಲಕ್ಕಪ್ಪಗೌಡ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ, ಕುಪ್ಪಳಿ
2. ಗಂಗೋತ್ರಿ, ಕುವೆಂಪು ಅಭಿನಂದನಾ ಗ್ರಂಥ ಗೀತಾ ಬುಕ್‌ಹೌಸ್, ಮೈಸೂರು.
3. ಕನ್ನಡ ನಾಟಕಾವಲೋಕನ : ಸಂ. ಡಾ. ನಾಗರತ್ನಮ್ಮ, ಡಾ. ವೆಂಕಟರಾಮಣ್ಣ ಉಷಾ ಪ್ರಕಾಶನ, ಹೆಬ್ಬಾಳು ಎರಡನೇ ಹಂತ, ಮೈಸೂರು.
4. ಶೂದ್ರತಪಸ್ವಿ : ಕುವೆಂಪು, ಉದಯರವಿ ಪ್ರಕಾಶನ, ವಾಣಿವಿಲಾಸ ಪುರಂ, ಮೈಸೂರು.